# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IVA | ಬೆಂಗಳೂರು, ಮಂಗಳವಾರ, ೦೮, ಮಾರ್ಚ್, ೨೦೨೨(ಫಾಲ್ಗುಣ, ೧೭, ಶಕವರ್ಷ, ೧೯೪೩)<br>BENGALURU, TUESDAY, 08, MARCH, 2022(PHALGUNA, 17, SHAKAVARSHA, 1943) | ನಂ. ೯೯<br>No. 99 |
|---|---|---|


## ಕರ್ನಾಟಕಸರ್ಕಾರ

ಸಂಖ್ಯೆ : ಇಡಿ 52 ಪಿಜಿಸಿ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:07-03-2022

## ಅಧಿಸೂಚನೆ

ಕರ್ನಾಟಕ ಶಿಕ್ಷಣ ಅಧಿನಿಯಮ, 1983 (1995ರ ಕರ್ನಾಟಕ ಅಧಿನಿಯಮ 1 ಮತ್ತು 3)ರ 145ನೇ ಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ, ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳ (ನೊಂದಣಿ ಮತ್ತು ವರ್ಗೀಕರಣ) ತಿದ್ದುಪಡಿ ನಿಯಮಗಳು, 2018ರ ನಿಯಮಕ್ಕೆ ತಿದ್ದುಪಡಿ ತರಲು ರಾಜ್ಯ ಸರ್ಕಾರವು ಉದ್ದೇಶಿಸಿದ್ದು, ಈ ಅಧಿಸೂಚನೆ ಪ್ರಕಟಿಸಿದ 05 (ಐದು) ದಿನಗಳೊಳಗಾಗಿ ಈ ಮುಂದಿನ ನಿಯಮಗಳ ಕರಡನ್ನು ಈ ಸಂಬಂಧ ಬಾಧಿತರಾಗಬಹುದಾದ ವ್ಯಕ್ತಿಗಳಿಂದ ಸಂಘ, ಸಂಸ್ಥೆಗಳಿಂದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಲಾಗಿತ್ತು.

ಸದರಿ ಕರಡಿಗೆ ಸಂಬಂಧಿಸಿದಂತೆ ಯಾವೊಬ್ಬ ವ್ಯಕ್ತಿಯಿಂದ, ಸಂಘ ಸಂಸ್ಥೆಗಳಿಂದ ಯಾವುದೇ ಆಕ್ಷೇಪಣೆ ಅಥವಾ ಸಲಹೆಗಳು ಸ್ವೀಕೃತವಾಗಿರುವುದಿಲ್ಲ. ಆದರೆ, ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಂದ ಸ್ವೀಕೃತವಾದ ಸಲಹೆಯನ್ನು ಸಕಾರಾತ್ಮಕವಾಗಿ ಪರಿಗಣಿಸಲಾಗಿದೆ.

ಪ್ರಸ್ತುತದಲ್ಲಿ, ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳ (ನೋಂದಣಿ ಮತ್ತು ವರ್ಗೀಕರಣ) ತಿದ್ದುಪಡಿ ನಿಯಮಗಳು, 2018 ನಿಯಮ (3)ರಲ್ಲಿನ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಈ ಕೆಳಕಂಡಂತೆ ನಿಯಮವನ್ನು ರಚಿಸಲಾಗಿದೆ.

## ನಿಯಮಗಳು

1. **ಶೀರ್ಷಿಕೆ ಮತ್ತು ಪ್ರಾರಂಭ :-** (1) ಈ ನಿಯಮಗಳನ್ನು ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳ (ನೋಂದಣಿ ಮತ್ತು ವರ್ಗೀಕರಣ) (ತಿದ್ದುಪಡಿ) ನಿಯಮಗಳು, 2022 ಎಂದು ಕರೆಯತಕ್ಕದ್ದು.

(2) ದಿನಾಂಕ 22ನೇ ಏಪ್ರಿಲ್ 2021ರಿಂದ ಅನ್ವಯವಾಗುವಂತೆ ಜಾರಿಗೆ ಬರತಕ್ಕದೆಂದು ಭಾವಿಸುವುದು.

**2. 3ನೇ ನಿಯಮದ ತಿದ್ದುಪಡಿ :-** ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳ (ನೋಂದಣಿ ಮತ್ತು ವರ್ಗೀಕರಣ) ನಿಯಮಗಳು, 1997ರ 3ನೇ ನಿಯಮದಲ್ಲಿ (3)ನೇ ಉಪ ನಿಯಮದ ಬದಲಿಗೆ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ :-

"(3)(ಎ) ಒಮ್ಮೆ ಪಾವತಿಸಿದ ನೋಂದಣಿ ಮತ್ತು ಸಂಸ್ಕರಣಾ ಶುಲ್ಕವು ಪಾವತಿಸಿದ ದಿನಾಂಕದಿಂದ ಮೂರು ವರ್ಷಗಳಿಗೆ ಮಾನ್ಯವಾಗಿರುತ್ತದೆ; ಮತ್ತು

(ಬಿ) ಆದರೆ, ನಿಗದಿತ ಮೂರು ವರ್ಷಗಳೊಳಗಾಗಿ ನೋಂದಣಿಗೆ ಅನ್ವಯಿಸುವ ಷರತ್ತುಗಳನ್ನು ಪೂರೈಸಲು ಅರ್ಜಿದಾರರು ವಿಫಲವಾದಲ್ಲಿ, ಪಾವತಿಸಿದ ನೋಂದಣಿ ಮತ್ತು ಸಂಸ್ಕರಣಾ ಶುಲ್ಕವನ್ನು ಯಾವುದೇ ಕಾರಣಕ್ಕೂ ಮರುಪಾವತಿಸಲಾಗುವುದಿಲ್ಲ."

**3. ನಿರಸನ :-** ದಿನಾಂಕ: 23-07-2021ರಂದು ಕರ್ನಾಟಕ ರಾಜ್ಯ ಪತ್ರದ ಭಾಗ IVA ರಲ್ಲಿ ಪ್ರಕಟಿಸಲಾದ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಮಾನ್ಯತೆ) (ತಿದ್ದುಪಡಿ) ನಿಯಮ, 2020ರ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 52 ಪಿಜಿಸಿ 2020, ದಿನಾಂಕ: 22-04-2021 ನ್ನು ನಿರಸನಗೊಳಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಹೆಚ್. ಎಸ್. ಶಿವಕುಮಾರ್)**
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಪ್ರಾಥಮಿಕ ಶಿಕ್ಷಣ).

## GOVERNMENT OF KARNATAKA

File No: ED 52 PGC 2020

Karnataka Government Secretariat
M S Building
Bengaluru, Dated:07-03-2022.

## NOTIFICATION

The draft rules further to amend the Karnataka Educational Institutions (Classification and Registration) Amendment Rules, 2018 which the Government of Karnataka proposes to make in exercise of the powers conferred by sub-section (1 and 3) of section 145 of the Karnataka Education Act, 1983 (Karnataka Act 01 of 1995) is hereby published as required by sub-section (1) of section 145 of the said Act, for the information of all persons likely to be affected thereby and notice is hereby given that the said draft will be taken into consideration within five days from the date of its publication in the official Gazette.

And whereas the said Gazette was made available to public on 24-02-2022.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



No objection or suggestions are received from the general public. Whereas, a suggestion has been received from The Commissioner of Public Instructions, Bengaluru and the suggestion is considered favourably.

Now, therefore, in exercise of the powers conferred by Karnataka Educational Institutions (Classification and Registration) Amendment Rules, 2018 in rule 3 the Government of Karnataka hereby makes the following rules.

**RULES**

**1. Title and commencement.-** (1) These rules may be called the Karnataka Educational Institutions (Classification and Registration) (Amendment) Rules, 2022.

(2) They shall be deemed to have come into force with effect from the 22nd day of April 2022.

**2. Amendment of rule 3.-** In the Karnataka Educational Institutions (Classification and Registration) Rules, 1997, in rule 3, after sub-rule (3), the following shall be substituted, namely :-

" (3) (a) Registration and processing fee, once paid, shall be valid for a period of three years from the date of payment.

(b) If the applicant fails to obtain registration within three years from the date of payment of the Registration and processing fee, such fee shall not be refunded for any reason. "

**3. Repeal. -** The Karnataka Educational Institutions (Recognition of Primary and Secondary Schools) (Amendment) Rules, 2020 vide Notification No. ED 52 PGC 2020, dated: 22-04-2021 published in part IVA of Karnataka Gazette dated: 23-07-2021 are hereby repealed.

*By order and in the name of*
*the Governor of Karnataka,*

***(H.S. Shivakumar)***
*Under Secretary to Government*
*Education Department (Primary)*

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
SUNIL GARDE